Regd No M 1299 Sri ಶಾ 3—10—51

SATYAVADI = 35th Year

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ನಮ್ಮ ಕರ್ತವ್ಯ

ಮಹಾಚುನಾವಣೆಯು ಹತ್ತಿರ ಬಂತು. ಪ್ರಾಪ್ತವಯಸ್ಸಿನ ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಿಂದ ಯೋಗ್ಯರಾಗಿರುವರೊಬ್ಬರನ್ನು ಪ್ರತಿನಿಧಿಯನ್ನಾಗಿ ಆರಿಸಬೇಕಾಗಿದೆ. ಚೆನ್ನಾಗಿ ಯೋಚಿಸಿ ಪೂರ್ಣ ನಿಸ್ವಾರ್ಥದಿಂದ ಜನತೆಯ ಸೇವೆಮಾಡತಕ್ಕ ಸತ್ಪುರುಷನನ್ನು ಆರಿಸುವ ಜವಾಬ್ದಾರಿಯು ಜನಗಳ ಮೇಲಿದೆ. ಅದರಿಂದ ಜನಗಳು ತಾವು ಓಟು ಕೊಡುವ ಮನುಷ್ಯನ ಶೀಲ, ನಡತೆಗಳನ್ನು ಪರೀಕ್ಷಿಸಿ, ತಪ್ಪು ಜನಗಳಿಗೆ ಓಟು ಹೋಗದಂತೆ ಎಂಡೆಂಡು ಸಲ ಯೋಚಿಸಿ ಸರಿಯಾದವನಿಗೇ ಓಟು ಕೊಟ್ಟು ಆರಿಸಬೇಕು.

ಈಗ ಪಕ್ಷಗಳ ಹಾವಳಿ ಜಾಸ್ತಿಯಾಗಿದೆ. ಕಾಂಗ್ರೆಸ್ ಪಕ್ಷ, ಪ್ರಜಾ ಪಕ್ಷ, ಜನತಾ ಪಕ್ಷ, ಸಮಾಜವಾದ ಪಕ್ಷ, ಕಮ್ಯೂನಿಸ್ಟ್ ಪಕ್ಷ, ರೈತ ಪಕ್ಷ, ಹಿಂದೂ ಮಹಾಸಭೆಯ ಪಕ್ಷ ಇತ್ಯಾದಿ ಹಲವಾರು ಪಕ್ಷಗಳು ಹುಟ್ಟಿವುದಾದರೂ ಚುನಾವಣೆ ಕಾಲಬಂದಾಗ, ಮಳೆಗಾಲದಲ್ಲಿ ಮುಳ್ಳು ಕೀರೆಗಿಡಗಳು ಹುಲುಸಾಗಿ ಬೆಳೆದು ಹಬ್ಬುವಂತೆ ಈ ಪಕ್ಷಗಳೂ ಹುಟ್ಟಿ ಹಬ್ಬುತ್ತವೆ. ಈ ಪಕ್ಷಗಳೆಲ್ಲವೂ ಜನಗಳನ್ನು ಭ್ರಾಂತಗೊಳಿಸಿ ನೋಸ ಮಾಡತಕ್ಕವುಗಳು. ಪ್ರತಿಯೊಂದು ರಾಜಕೀಯ ಪಕ್ಷದ ಧ್ಯೇಯ, ಉದ್ದೇಶಗಳು, ಕಾರ್ಯ ಕ್ರಮಗಳು ಬಹಳ ಚೆನಾಗಿರುತ್ತವೆ. ಆದರೆ, ಅವರ ಧ್ಯೇಯದಂತೆ, ಉದ್ದೇಶದಂತೆ, ಕಾರ್ಯಕ್ರಮದಂತೆ ನಡೆಯುವ ಪಕ್ಷವು ಮಾತ್ರ ಒಂದೂ ಇಲ್ಲ. ಯಾವ ಪಕ್ಷವೇ ಆಗಲಿ ಚುನಾವಣೆಗೆ ಮೊದಲು ಹರಿಶ್ಚಂದ್ರ, ಕರ್ಣ, ದಧೀಚಿಗಳ ಅವತಾರರು ಚುನಾವಣೆಯಲ್ಲಿ ಜಯಗಳಿಸಿದ ಬಳಿಕ ಜನಗಳನ್ನು ಸುಲಿಗೆಮಾಡಿ ವೈರಿಯುವ ದರೋಡೆಗಾರರಾಗುತ್ತಾರೆ. ಇದು ಎಲ್ಲಾ ಪಕ್ಷದವರ ಸ್ವಭಾವ

ಉದಾಹರಣೆಗೆ, ಮಹಾತ್ಮಾ ಗಾಂಧಿಯವರಂಥಾ ವಿಭೂತಿಪುರುಷರ ಅನುಯಾಯಿಗಳೆಂದು ಹೇಳಿಕೊಂಡು ಚುನಾವಣೆಯಲ್ಲಿ ಜಯಗಳಿಸಿ ದೇಶದ ಆಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷವನ್ನೇ ನೋಡಿರಿ. ತತ್ವಗಳೇ ಬೇರೆ ನಡತೆಯೇ ಬೇರೆ. ಕಾಂಗ್ರೆಸ್ಸಿನವರ ಆಡಳಿತ ಪ್ರಾರಂಭವಾದ ಬಳಿಕ ಜನಗಳ ಕಷ್ಟ ನಿವಾರಣೆಯಾಗುವದರ ಬದಲಿಗೆ ಜನಗಳು ಇನ್ನಷ್ಟು ಹತ್ತಿಪ್ಪತ್ತು ಪಾಲು ಹೆಚ್ಚು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಧರ್ಮ, ನೀತಿ ನ್ಯಾಯಗಳೆಲ್ಲವೂ ದೇಶದಲ್ಲಿ ಕಣ್ಮರೆಯಾಗಿವೆ ಸತ್ಯ ನೀತಿಗಳನ್ನನುಸರಿಸಿ ಯಾರೂ ಪೊಟ್ಟೆ ತುಂಬಾ ಅನ್ನ ಊಟ ಮಾಡುತ್ತಿಲ್ಲ. ಮೈಮುಚ್ಚಿಕೊಳ್ಳಲು ಬಟ್ಟೆಗೂ ಕಷ್ಟ. ಲಂಚ, ರುಸುವತ್ತು, ಸ್ವಾರ್ಥ, ನೋಸಗಳು ತಾಂಡವಾಡುತ್ತಿವೆ ನಮ್ಮ ಧರ್ಮ ನಮ್ಮ ಸಂಸ್ಕೃತಿ, ನಮ್ಮ ದೇಶ ಎಂಬ ಅಭಿಮಾನಗಳು ಆಗಲೇ ಗಡೀಪಾರು ಮಾಡಲ್ಪಟ್ಟಿವೆ. ದೇಶವನ್ನ ಸ್ವರ್ಗತುಲ್ಯವಾಗಿ ಮಾಡುತ್ತೇವೆಂದು ಹೇಳಿ ವಾಗ್ದಾನ ಮಾಡಿದ ಕಾಂಗ್ರೆಸ್ ಪಕ್ಷದ ಆಡಳಿತ ಕತೆಯೇ ಹೀಗಿದೆ. ಮತ್ತೆ ಯಾರು ಅವರನ್ನೇ ಓಟು ಕೊಟ್ಟು ಮುಂದಕ್ಕೆ ತಳ್ಳುವಿರಾ? ಯೋಚಿಸಿ ನೋಡಿರಿ.

(ಮುಂದುವರಿಯುವುದು)

× ಮಹಾತ್ಮ ಗಾಂಧೀಜೀಯವರ ಜಯಂತ್ಯುತ್ಸವ ದೇಶಾದ್ಯಂತ ಸಿನಿಮೈ ವೈಭವದಿಂದ ಸೆರವೇರಿತು.

× ಇದೇ ತಾ|| 10 ರೊಳಗೆ ಆಂಧ್ರಪ್ರಾಂತ ರಚನೆ ಬಗೆಗೆ ಪಂ|| ನೆಹರು ಹೇಳಿಕೆ ಕೊಡುವ ನಿರೀಕ್ಷಣೆಯಿದೆಯೆಂದು ಗುಂಟೂರು ವಾರ್ತೆ.

ಪ್ರವಾಹದಿಂದ ಅನಾಹುತ — ಭತ್ತ ನಾಶ

ಸಂಪೂರ್ಣವಾಗಿ ಭತ್ತದ ಬೆಳೆ ಧಖಾವ್‌ಖಾನ, ಬದರ್ಹಾಟಾನಿ, ಗೋಹಯಿನ್, ಸಿಸಿ ಮತ್ತು ವಜ್‌ಖೌವಾಗಳಲ್ಲಿ ಬ್ರಹ್ಮಪುತ್ರ ಪ್ರವಾಹದಿಂದಾಗಿ ನಾಶವಾಗಿರುವದಾಗಿ ದಿಬ್ರುಗರವಾರ್ತೆ ಪ್ರವಾಹ ಬಂದ ಪ್ರದೇಶಗಳಲ್ಲಿ ಪಾಣಿಗಳ ಶೋಗ ಅಧಿಕವಾಗಿದೆ

— ವೈಜಯಂತಿಮಾಲಾಳ ನರ್ತನವಿರುವ ಒಹಾರ ಹಿಂದಿ ಚಿತ್ರದ ನರ್ತನದ ಒಂದು ದೃಶ್ಯ ತೆಗೆದುಕೊಳ್ಳಲು ರೂ 3ಠ ಲಕ್ಷ ಖರ್ಚಾಗುವದೆಂದು ಮದರಾಸು ವಾರ್ತೆ

— ಭಾರತ ಸರ್ಕಾರ ಪಶ್ಚಿಮ ಮತ್ತು ಉತ್ತರದ ಕೆಲವೆಡೆಗಳಲ್ಲುಂಟಾಗಿರುವ ಬರವನ್ನು ತಪ್ಪಿಸಲೆತ್ನಿಸುತ್ತಿದೆ.

ದಿವ್ಯವಾಣಿ

ಒಬ್ಬ ಜಗಳಗಂಟ ಮನುಷ್ಯನು ಒಳ್ಳೆಯ ನೆರೆಹೊರೆಯವರನ್ನು ಹೊಂದಿರುವುದಿಲ್ಲ. — ಚಿಂಗ್‌ಚಾ.

ವಾರ್ತೆಗಳು

× ವೈನಾಡು ಮೆಣಸಿನ ಬೆಲೆ ಈಗ ಕ್ಯಾಂಡಿಯೊಂದಕ್ಕೆ ರೂ. 4100 ಎಂದು ಕೋಸಿಕೋಡು ವಾರ್ತೆ.

× ಭಾರತ ಸ್ವಾತಂತ್ರ್ಯಕ್ಕೆ ಸಹಕರಿಸಿದ ಲಾರ್ಡ್ ಪೆಥಿಕ್ ಲಾರೆನ್ಸ್ ಏವಾಹಮಹೋತ್ಸವದ ಸ್ವರ್ಣಮಹೋತ್ಸವ ವೈಭವದಿಂದ ನೆರವೇರಿತೆಂದು ಮದರಾಸು ವಾರ್ತೆ.

× ಪರ್ಷಿಯಾ ತೈಲ ರವಾನೆಗೆ ಬ್ರಿಟೀ ಆತಂಕವೊಡ್ಡಿದರೆ ಸಮರವಾಗಬಹುದೆಂದು ಪರ್ಷಿಯಾ ಬ್ರಿಟನ್ನನ್ನು ಎಚ್ಚರಿಸಿದೆ.

× ಚಿಕ್ಕಬಳ್ಳಾಪುರದಲ್ಲಿ 2—3 ತಿಂಗಳಿಂದ ಸೊಪ್ಪನ್ನು ತೂಕಮಾಡಿಕೊಡುತ್ತಿದ್ದಾರೆ. ಇದೊಂದು ಹೊಸ ಪದ್ಧತಿ

× ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಚರ್ಚೆ ಬರುವ ಸಂಭವವಿಲ್ಲ

ತಮಿಳರಿಗೆ ಸಲಹೆ

ಕನ್ನಡವನ್ನು ಚನ್ನಾಗಿ ಕಲಿಯಲು ಮೈಸೂರು ವಿಶ್ವವಿದ್ಯಾನಿಲಯದ ತಮಿಳು ಸಂಘದವರಿಗೆ ಸಚಿವ ಶ್ರೀ ಭಾಷ್ಯಂ ತಿಳಿಸಿರುವದಾಗಿ ಬೆಂಗಳೂರು ವಾರ್ತೆ

ಉಡ್‌ಲಾಂಡ್ಸ್

5—10—51 ರಿಂದ

ನಿರೂಪರಾಯ್, ತ್ರಿಲೋಕ್ ಕಪೂರ್ ಅಭಿನಯಿಸಿರುವ

ಪ್ರತಿ ಸಂಸಾರವೂ ನೋಡಲೇಬೇಕಾದ ಅಮೋಘ ಪೌರಾಣಿಕ ಹಿಂದಿ ಚಿತ್ರ

ಗಣೇಶ ಜನ್ಮ

ಪ್ರತಿ ದಿನ 3 ಪ್ರದರ್ಶನಗಳು

ಪತ್ರಿಕಾ ಸಂಮೇಳನ

ಮೈಸೂರು : ಕೃತಕ ಅಕ್ಕಿ ಮತ್ತು ಟೋಪಿಯೋಕಾ ಹಿಟ್ಟಿನ ಉಪಯೋಗದಿಂದ ರೇಷನ್ ಧಾನ್ಯಗಳ ತೊಡಕನ್ನು ಪರಿಹರಿಸಿಕೊಳ್ಳಬಹುದು. ಬ್ಲಾಕ್ ಮಾರ್ಕೆಟ್ಟಿನಲ್ಲಿ ಧಾನ್ಯ ಕೊಳ್ಳುವದಕ್ಕಿಂತ ಇದರ ಬೆಲೆ ಸುಲಭವಿದೆ. ಗೃಹಿಣಿಯರು ಇದನ್ನು ಗಮನಿಸಬೇಕು — ಹೀಗೆಂದು ಅಖಿಲ ಭಾರತ ಮಹಿಳಾ ಆಹಾರ ಸಮಿತಿ ಮೈಸೂರು ಅಧ್ಯಕ್ಷಣಿಯವರಾದ ಶ್ರೀಮತಿ ಕೆ. ಸಿ. ರೆಡ್ಡಿಯವರು ಈ ಬೆಳಿಗ್ಗೆ ದಸರಾ ವಸ್ತುಪ್ರದರ್ಶನಾಲಯದಲ್ಲಿರುವ ಆಹಾರ ಸಮಿತಿಯ ಕೂಟದಲ್ಲಿ ಪತ್ರಿಕೆಯವರಿಗೆ ತಿಳಿಸಿದರು. ಈಗ ಕೃತಕ ಧಾನ್ಯಗಳನ್ನು ತಯಾರಿಸುತ್ತಿರುವ ತಿಂಡಿಗಳನ್ನು ಅಸಲು ಕ್ರಯಕ್ಕೆ ಪೂರುತ್ತಿರುವುದಾಗಿ ಅವರು ತಿಳಿಸಿದರು.

ಉದ್ಘಾಟನೆ

ಮೈಸೂರು : ಶ್ರೀಮಾನ್ ಹೆಚ್. ಸಿ. ದಾಸಪ್ಪನವರು ನಿನ್ನೆ ಸಂಜೆ ಮೈಸೂರು ದಸರಾ ವಸ್ತುಪ್ರದರ್ಶನ ಉದ್ಘಾಟನೋತ್ಸವ ನೆರವೇರಿಸುತ್ತಾ, ಈ ಬಾರಿಯ ಪ್ರದರ್ಶನ ಆರ್ಥಿಕ, ಸಾಮಾಜಿಕ ವ್ಯಾವಸಾಯಿಕ ಮುಂತಾದುವದರಲ್ಲಿ ಪ್ರಗತಿ ಪಡೆದಿರುವದಾಗಿ ತಿಳಿಸಿದರು.

ಮತದಾರರ ಸಂಖ್ಯೆ

ಹೈದರಾಬಾದಿನಲ್ಲಿ ಚುನಾವಣಾ ಮತದಾರ ಪಟ್ಟಿ ಸಿದ್ಧವಾಯಿತು ಮತದಾರರ ಸಂಖ್ಯೆ 90.4 ಲಕ್ಷ

ಎರಡನೇ ವಾರ್ಷಿಕೋತ್ಸವ

ಮೊನ್ನೆ ಪೀಕಿಂಗ್‌ನಲ್ಲಿ ಕೆಂಪುಚೀನ ಸಂಸ್ಥಾಪನೆಯ 2 ನೇ ವಾರ್ಷಿಕೋತ್ಸವ 4 ಲಕ್ಷ ಮಂದಿ ಪೆರೇಡಿನಲ್ಲಿ ಸೇರಿದ್ದರು

ಬಂದೂಕು ಹಾರಿ ಸಾವು

ಮಂಡ್ಯದಲ್ಲಿ ಮೊನ್ನೆ ಪ್ರಖ್ಯಾತ ನಟಿ ಶ್ರೀಮತಿ ಲಕ್ಷ್ಮಿ ಬಾಯಿಯವರ ಹದಿನಾಲ್ಕು ವಯಸ್ಸಿನ ದತ್ತುಪುತ್ರಿ ಓರ್ವ ಬಾಲಕ ಬಂದೂಕ ಹಾರಿಸಿದುದರ ಫಲವಾಗಿ ಸತ್ತಳೆಂದು ವರದಿಯಾಗಿದೆ

4—10—51 ರಿಂದ

ಮೈಸೂರು

ಅಪೇರಾ ಟಾಕೀಸಿನಲ್ಲಿ

ಬೆಳಗಿನ ಪ್ರದರ್ಶನ

ONE MILLION B. C.

(ಹಿಂದಿನ ಪುಟದಲ್ಲಿ ತಪ್ಪು ಬಿದ್ದಿರುವದನ್ನು ತಿದ್ದುಪಡಿಮಾಡಿಕೊಳ್ಳಬೇಕಾಗಿ ಪ್ರಾರ್ಥನೆ)

ಸಂಪುಟ ೧೦ ಸಂಚಿಕೆ ೬ ॥ಶ್ರೀ॥ ತಾ॥ 1-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ ವ. ಸ್ವ. ಸಂಘ

ಧರ್ಮ ಮತ್ತು ಭಗವಂತನ ವಿರುದ್ಧ ಚಳವಳಿ

[ಜಿ. ಆರ್. ಮಹಾಬಲಭಟ್ಟ, ವೇದಾಂತ ಶಿರೋಮಣಿ, ವೇದಾಂತ ವಿಶಾರದ
ದ್ವಾರಕಾ ಸಂಸ್ಥಾನ, ಮುಳಬಾಗಿಲು ಮಠ]

(ಮುಂದುವರಿದದ್ದು)

ಈಶ್ವರವಾದಿ ಸಂಪ್ರದಾಯದಲ್ಲಿಯೂ ಒಬ್ಬನು ಇನ್ನೊಬ್ಬನನ್ನು ನಾಸ್ತಿಕ-ತಾಫರ ಎಂದು ಮುಂತಾಗಿ ಹೇಳಲು ತಪ್ಪುವುದಿಲ್ಲ. ಪ್ರತಿಯೊಂದು ಈಶ್ವರವಾದಿ ಸಂಪ್ರದಾಯವೂ ಕೇವಲ ತಾನು ಮಾತ್ರ ಈಶ್ವರನ ಅನುಯಾಯಿಯೆಂದೂ, ಉಳಿದ ಜಗತ್ತೆಲ್ಲವೂ ಪಿಶಾಚಿಯ ಅನುಯಾಯಿಯೆಂದೂ ತಿಳಿದಿರುವುದು, ಮತ್ತು ಇತ್ತೀಚೆಯ ಬಹುಪೂರ್ವದ ಯುಗದಲ್ಲಿ ಆ ಪಿಶಾಚಿಗೆ ಎಷ್ಟು ಶಾಪಗಳನ್ನೆ, ಎಷ್ಟು ಗಾಲಿ ದೊರಕುವುದೆಂಬುದನ್ನು ಮರೆತುಬಿಡುವುದು. ಇಂತಹ ಸ್ಥಿತಿಯಲ್ಲಿ ಒಂದು ಲೇಖನದಿಂದೇನು, ಒಂದು ಪುಸ್ತಕಾಲಯವೂ ಕೂಡ ಈ ಸೃಷ್ಟಿ ವಿಧಾಯಕವಾದ, ಸಹಜವಾದ ಮತಭೇದವನ್ನು ಎಂದೂ ದೂರಮಾಡಲು ಶಕ್ತವಾಗದು.

ಈಶ್ವರವಾದಿಗೆ ತನ್ನ ಮತವನ್ನು ಪ್ರಚಾರಮಾಡುವ ಹಕ್ಕಿರುವುದಾದರೆ ಅದು ಅನೀಶ್ವರವಾದಿಗೂ ಇದೆ; ಈಶ್ವರವಾದಿಯ ದೊಡ್ಡದೊಡ್ಡ ಪುಸ್ತಕಗಳನ್ನು ಓದಿ ಈಶ್ವರ ವಾದವನ್ನು ಪ್ರಚಾರಮಾಡಿದರೆ, ಅನೀಶ್ವರವಾದಿಯೂ ಈಶ್ವರವಾದಿಗಳ ಸ್ಕೂಲ ಬಹುಮತವನ್ನೆದುರಿಸಲು ಒಂದೆರಡು ಲೇಖನಗಳನ್ನಾದರೂ ಬರೆಯಲಾರನೆಂದು ಹೇಳಲು ಕಾರಣವೇನೂ ಇಲ್ಲವಷ್ಟೆ?

— ಧರ್ಮದ ಮಾತು —

ಈಗ ಅನೀಶ್ವರವಾದದ ಲೇಖನಗಳ ಗುಣ ಮತ್ತು ಬೆಲೆಯನ್ನು ವಿಚಾರಮಾಡೋಣ. ಒಂದು ಹಿಂದೀ ಮಾಸಪತ್ರಿಕೆಯಲ್ಲಿ 'ಧರ್ಮ ಔರ ಭಗವಾನ್' ಎಂಬುದೊಂದು ಲೇಖನವು ಬಂದಿದ್ದಿತು. ಅದರಲ್ಲಿ ಹೀಗೆ ಬರೆದಿದ್ದಿತು—'ಯಾವ ಜನರು ಧರ್ಮದ ಸಂಶಯದಲ್ಲಿರಲು ಅಭಯ ಪ್ರದಾನ ಮಾಡುತ್ತಾರೆಯೋ, ಅವರು ಹಾಸ್ಯಾಸ್ಪದವಾದ ಮಾತನ್ನು ಹೇಳುತ್ತಿರುವರು.

ಇದು ಸರ್ವಥಾ ಸರಿಯಾದದ್ದು ಆದರೆ ಮುಂದೆ ಹೀಗೆ ಬರೆಯಲಾಗಿದೆ 'ಕೀರ್ತಿ ಮತ್ತು ಮರ್ಯಾದೆಯನ್ನಿಚ್ಛಿಸುವ ಯಾವನಾದರೊಬ್ಬನ ಕುಶಲ ಲೇಖಕನ ಕಥಾನಕವಿದ್ದಂತೆ ಧರ್ಮವಾದರೂ ಅಂತಹುದೇ ಒಂದು ವಸ್ತುವಾಗಿದೆ'.

ಧರ್ಮ ಶಬ್ದದ ವ್ಯಾಖ್ಯಾನ ಮಾಡುವ ಅಧಿಕಾರಿಗಳು ಏನಿದೇತರಹ ಮಾಡುತ್ತಾರೇನು? ಧರ್ಮದ ವಿಷಯದಲ್ಲಿ ಅಜ್ಞಾನಿಗಳ ಪ್ರಮಾಣವು ಒಪ್ಪಲ್ಪಡುವುದೇನು? ಸತ್ಯವನ್ನು ಹುಡಕತಕ್ಕವನು ಮತ್ತು ಪರೀಕ್ಷೆ ಮಾಡತಕ್ಕವನು ಇದೇ ತರಹ ಸ್ವೇಚ್ಛೆಯಾಗಿ ಪರಿಭಾಷೆ ಮಾಡಿಬಿಡುವನೇನು?

ಅಗ್ನಿಯ ಧರ್ಮವು ಸುಡುವುದು; ಪಿತೃವಿನ ಧರ್ಮವು ಸಂತಾನ ಪಾಲನೆ ಪೋಷಣೆ ಮಾಡುವುದು: ವಿದ್ಯಾರ್ಥಿಯ ಧರ್ಮವು ವಿದ್ಯಾಧ್ಯಯನ. ಅಹಿಂಸೆಯು ಶ್ರೇಷ್ಠವಾದ ಧರ್ಮವು: ಸತ್ಯ ಶೀಲತೆಗಿಂತಲೂ ಹೆಚ್ಚಿನದಾದ ಇನ್ನೊಂದು ಧರ್ಮವಿಲ್ಲ; ಈ ವಾಕ್ಯಗಳನ್ನು ಸಾಮಾನ್ಯವಾದ ಸಂಭಾಷಣೆಯಲ್ಲಿ ವಿದ್ಯಾವಂತರು ಪ್ರಯೋಗಿಸುತ್ತಿರುವುದೇನು ನಿಮ್ಮೇ? ಧರ್ಮವೆಂದರೆ ಲೇಖಕನು ಹೇಳುತ್ತಿದ್ದಂಯೇ ಇರುವುದೇನು?

ಇಲ್ಲ, ಎಂದಿಗೂ ಇಲ್ಲ ಆ ಲೇಖಕನೇನೆಯೇ ಧರ್ಮ ಶಬ್ದದ ಪ್ರಯೋಗವನ್ನು ಆ ಲೇಖನದಲ್ಲಿ ಪಾರಿಭಾಷಿಕವಾದ ಅರ್ಥದಲ್ಲಿ ಮಾಡಿರುವೆನೆಂದು ಎಂದಿಗೂ ಒಪ್ಪಲಾರನು. ಹಾಗಾದರೆ ಧರ್ಮಶಬ್ದದಲ್ಲಿ ಅತನ ತಾತ್ಪರ್ಯವೇನು? ಯಾವ ಅರ್ಥದಲ್ಲಿ ಸಂಶಯದ ಅಭಯ ಪ್ರದಾನ ಮಾಡತಕ್ಕವರು ತೆಗೆದುಕೊಳ್ಳುತ್ತಾರೆಯೋ ಅದೇ ಅರ್ಥವನ್ನು ಧರ್ಮ ಶಬ್ದಕ್ಕೆ ತೆಗೆದುಕೊಂಡಿರುವನೆಂಬ ಮಾತನ್ನು ಅತನು ಒಪ್ಪುವನು. ನಮ್ಮ ಈ ಊಹೆಯು ನಿಜವಾದರೆ ಅವನು ಧರ್ಮದ ಸ್ಥಳದಲ್ಲಿ ಸಂಪ್ರದಾಯ ಶಬ್ದವನ್ನು ಪ್ರಯೋಗಿಸಬೇಕಾಗಿದ್ದಿತು ಅತನು ಧರ್ಮ ಶಬ್ದವನ್ನು ಅಶುದ್ಧವಾಗಿ ಪ್ರಯೋಗಿಸಿ ತನ್ನ ಪಾರ್ಜ್ಞತೆ ಮತ್ತು ಸಾಹಿತ್ಯಜ್ಞತೆಯನ್ನು ಸಂಶಯದಲ್ಲಿ ಕೆಡವಿಕೊಂಡನು. ಧರ್ಮವಾದರೋ ಸಂಶಯದಲ್ಲಿ ಬೀಳತಕ್ಕ ವಸ್ತುವಲ್ಲ; ಧಾರಣಾದ್ಧರ್ಮಃ ಎಂಬುದು ಧರ್ಮದ ವೈಜ್ಞಾನಿಕ ಪರಿಭಾಷೆ ಉಪ್ಪಿನ ಧರ್ಮವು ಉಪ್ಪಾಗಿರುವಿಕೆ ಇದೇ ಇಲ್ಲವೆಂದ ಉಪ್ಪಿನಲ್ಲಿ ಉಳಿದೀತು? ಆದ್ದರಿಂದಲೇ ಹೇಳಲಾಗಿದೆ— ಧರ್ಮೋ ರಕ್ಷಿತ ರಕ್ಷಿತಃ, ಧರ್ಮವನ್ನು ರಕ್ಷಿಸಿರಿ ಧರ್ಮವು ರಕ್ಷಿಸುವುದು: ಯತೋ ಧರ್ಮಸ್ತತೋ ಜಯಃ, ಧರ್ಮವಿದ್ದಲ್ಲಿ ಜಯವಿದೆ; ಧರ್ಮ ಮತ್ತು ಧರ್ಮಿಯ ಐಕ್ಯವೇ ಇದಕ್ಕೆ ಕಾರಣವು; ಧರ್ಮದಲ್ಲಿ ಉದ್ವೇಗಗೊಂಡು ತಿಳಿಯದೆ ವ್ಯರ್ಥವಾಗಿಯೇ ನಿಂದೆಮಾಡ ತೊಡಗುವುದು ಬುದ್ಧಿವಂತಿಕೆಯಲ್ಲ.

ಪ್ರಚಲಿತವಾಗಿರುವ ಅನೇಕ ರೀತಿಯ ರೂಢಿಗಳು ಧರ್ಮವೆನಿಸಲಾರವು, ಅವುಗಳನ್ನು ಸಂಪ್ರದಾಯವೆನ್ನಬೇಕು. ಇವುಗಳ ಮೂಲದಲ್ಲಿ ಬೇಕಾದಷ್ಟು ಸಮಾಜಧರ್ಮ ಮತ್ತು ವ್ಯಕ್ತಿಧರ್ಮಗಳು ಬೇಕಾದಷ್ಟಿರಬಹುದು. ಆದರೆ ಇವುಗಳ ಇಂದಿನ ಪಲ್ಲವಿತರೂಪವು ಸಾಂಪ್ರದಾಯಕವಾದುದೆಂಬುದರಲ್ಲಿ ಲೇಶವೂ ಸಂಶಯವಿಲ್ಲ

ಧರ್ಮವು ವ್ಯಾಪಕವಾದುದು; ಸಂಪ್ರದಾಯವಾದರೋ ಅತ್ಯಂತ ಸಂಕುಚಿತವಾದದು; ಇವೆರಡರಲ್ಲಿ ಭೇದವನ್ನರಿತು ಈ ಶಬ್ದವನ್ನು ಉಪಯೋಗಿಸಬೇಕು; ವ್ಯಕ್ತಿಧರ್ಮವು ವ್ಯಕ್ತಿಗೂ, ಸಮಾಜಧರ್ಮವು ಸಮಾಜಕ್ಕೂ ಮಂಗಳದಾಯಕಗಳಿರುವುವು; ಮಾನವ ಅಥವಾ ವ್ಯಕ್ತಿ ಮತ್ತು ಸಮಾಜವು ವಿಕಸಿತವೂ ಸ್ವಚ್ಛಂದವೂ ಇರುವುದರಿಂದ ಧರ್ಮದ ಪಾಲನೆ ಅಥವಾ ಅಪಾಲನೆಯು ಅವನ ಇಚ್ಛೆಯ ಮೇಲೆ ನಿಂತಿದೆ [ಸಶೇಷ

ದಾಕೋರಿನಲ್ಲಿ ಮಹೋತ್ಸವಗಳು

[ಸ್ವಂಸು ತಂತಿ] ದಾಕೋರ್, ಸೆ 24

ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರುಗಳವಂತಹ ಶ್ರೀ ಶಂಕರಾಚಾರ್ಯ ಅಭಿನವ ಸಚ್ಚಿದಾನಂದತೀರ್ಥಜಿ ಮಹಾರಾಜ್‌ರವರ ಅಧ್ಯಕ್ಷತೆಯಲ್ಲಿ ದಾಕೋರಿನಲ್ಲಿ ಅಕ್ಟೋಬರ್ ತಾ॥ 7 ರಿಂದ 12 ರ ವರಿಗೆ ವೈಭವಯುತ ಮಹೋತ್ಸವವಾದ ಶ್ರೀ ಚಂದ್ರಮೌಳೀಶ್ವರ ಮಹೋತ್ಸವ ಮತ್ತು ಮಹಾರುದ್ರ ಯಜ್ಞ ಏರ್ಪಾಟಾಗಿದೆ ಶ್ರೀ ಶಂಕರಾಚಾರ್ಯ ಭಾರತಿ ಕೃಷ್ಣತೀರ್ಥ ಮಹಾರಾಜರ ಮತ್ತು ಸ್ವಾಮಿ ಕರಪಾತ್ರಜೀಯವರು ಈ ಉತ್ಸವಕ್ಕೆ ಆಹ್ವಾನಿಸಲ್ಪಟ್ಟಿದ್ದಾರೆ

ಅಕ್ಟೋಬರ್ ತಾ॥ 2 ರಲ್ಲಿ ಶ್ರೀ ಜಗದ್ಗುರುಗಳವರ ಜನ್ಮದಿನೋತ್ಸವ ಆಚರಿಸಲ್ಪಡುವದು.

ಅಕ್ಟೋಬರ್ ತಾ॥ 2 ರಿಂದ 9 ರ ವರಿಗೆ ನವರಾತ್ರಿ ಉತ್ಸವ ನೆಡೆಯುವುದು.

Edited, Printed and Published by Dharma Prachara Nilaya M. S. Krishna Rao, at the Satyavadi Press Chamrajpuram Mysore

ಜೂಜಾಡುವ ರಾಣಿಯರು

ಚುಗುಟು ನೇದುವ ಚದುರೆಯರು

ವಿಲಾಯಿತಿಯಲ್ಲಿ ಹಿಂದೀ ರಾಜರಾಣಿಯರ ಜೀವನ

ಹಿಂದೆ ಭಾರತದಲ್ಲಿ ವಿಲಾಸ ವೈಭವಗಳಿಂದ ಮೆರೆಯುತ್ತಿದ್ದ ಹಲ ಮಂದಿ ಸಂಸ್ಥಾನಾಧೀಶರುಗಳು ಪ್ರಸ್ತುತ ಬ್ರಿಟಿಷ್ ಮತ್ತು ಯೂರೋಪುಗಿಳಲ್ಲಿ ಜೀವನ ನಡೆಸಿಕೊಂಡಿದ್ದಾರೆ ; ಅವರ ಚಟುವಟಿಕೆಗಳ ಕುರಿತು ಕೆಲವು ಬ್ರಿಟಿಷ್ ಪತ್ರಿಕೆಗಳಲ್ಲಿ ಪ್ರಕಟವಾದ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ಕೊಟ್ಟಿರುವೆವು.

ಒರೋಡಾ, ಗ್ವಾಲಿಯರ್, ಮೊರ್ವಿ ಮತ್ತು ನಾಭಾ ಮಹಾರಾಜರುಗಳು ಈಗ ಉತ್ತರ ಫ್ರಾನ್ಸ್ನ ಕರಾವಳಿಯ ಡ್ಯೂವಿಲ್ಲೆ ಎಂಬಲ್ಲಿ ವಾಸವಾಗಿದ್ದಾರೆ. ಬರೋಡಾ ಮಹಾರಾಣಿ ಚುರೂಟು ಸೇದುತ್ತಿರುವರೆಂದೂ, ಈಚೆಗೆ ' ಕೆಸಿನೊ ; (ನಾನಾ ತರದ ಜೂಜಾಟಗಳಿರುವ ವಿನೋದ ಭವನ) ದಲ್ಲಿ ನಡೆದ ಒಂದು ಜೂಜಿನ ಪಂದ್ಯದಲ್ಲಿ ಮಹಾರಾಣಿಯವರಿಗೆ ಒಂದು ತಾಸಿಗೆ 500 ಪೌಂಡು ನಷ್ಟ ವಾಯಿತೆಂದೂ ' ಸಂಡೆ ಎಕ್ಸ್ಪ್ರೆಸ್ ' ವರದಿಮಾಡಿದೆ.

ಗ್ವಾಲಿಯರ್, ನಾಭಾ ಮತ್ತು ಮೊರ್ವಿ ಮಹಾರಾಜರಿಗೂ ಈ ಪಂದ್ಯದಲ್ಲಿ ಕೆಲವು ಸಾವಿರ ಪೌಂಡು ನಷ್ಟವಾಯಿತೆನ್ನಲಾಗಿದೆ. ಆಗಾಖಾನರೂ ಡ್ಯೂವಿಲ್ಲಯಲ್ಲಿಯ ಜೂಜಿನ ಪಂದ್ಯದಲ್ಲಿ ಭಾಗವಹಿಸಿದ್ದರು : ಆದರೆ ಅವರು ಬಹಳ ಜಾಗರೂಕತೆಯಿಂದ ಜೂಜಾಡುತ್ತಿದ್ದಾರೆ : ಆಡುವುದೇ ಅಪರೂಪ ಹೀಗಾಗಿ ಅವರಿಗೆ ಹೆಚ್ಚಿನ ನಷ್ಟವಾಗಿಲ್ಲ.

ಡ್ಯೂವಿಲ್ಲೆಯಲ್ಲಿ ಆಗಾಖಾನರು ಜೂಜಿನಲ್ಲಿ ಭಾಗವಹಿಸಲು ಬರುವಾಗ ಅವರ ಸುತ್ತುಮುತ್ತಿ ಪತ್ತೇದಾರರು ಹಾಗೂ ಅಂಗರಕ್ಷಕರ ಒಳಗವೂ ಇರುತ್ತೆ. ಆಗಾಖಾನರು ಹೋದಲ್ಲೆಲ್ಲಾ ಈ ಬಳಗವೂ ಯಾರಿಗೂ ತಿಳಿಯದಂತೆ ನಾಗುತ್ತಿದೆ ; ಹೋಟಲಿಂದ ಆಗಾಖಾನರು ಹೊರಬೀಳುವಾಗ ಹಾಗೂ ಪಂದ್ಯ ಮುಗಿಸಿ ಹೋಟಲು ಸೇರುವಾಗ ನೂರಾರು ಮಂದಿ ಈ ದೃಶ್ಯವನ್ನು ಅತ್ಯುದಿಂದ ಕಾಣುತ್ತಿದ್ದಾರೆ ಕೆಲವರಿಗೆ ಅದೊಂದು ಕೌತುಕವಾಯ. ನೋಟವಾಗಿರುತ್ತೆ : ಚಕ್ರಗಳುಳ್ಳ ಕುರ್ಚಿಯಲ್ಲಿ ಆಗಾಖಾನರನ್ನು ಒಂದು ಕಡೆಯಿಂದ ಮತ್ತೊಂದ ಕಡೆಗೆ ಕರೆದೊಯ್ಯುತ್ತಾರೆ ಕೆಸಿನೋದಲ್ಲಿ ಡೆನ್ನಿ ಕೇಮತ್ತು ಸಂಗಾರ್ ರೇಗಳಿಗಿಂತ ಆಗಾಖಾನರ ಅಗವನ ನಿರ್ಗಮನಗಳನ್ನು ಹೆಚ್ಚಿನ ಅತ್ಯುದಿಂದ ನೋಡುತ್ತಾರೆ. ಅವರು ಬಂದರೆಂದರೆ ದಾರಿಯುದ್ದಕ್ಕೂ ನೂರಾರು ಮಂದಿ ಕಿಕ್ಕಿರದು ನೆರೆಯುತ್ತಾರೆ ; ಕೆಲವರು ಮೊಣಕಾಲೂರಿ ಆಗಾಖಾನರ ಕಾಲುಗಳನ್ನು ಮುತ್ತಿಡುವುದೂ ಇದೆ

ಅದೊಂದು ಲಂಡನ್ ಪತ್ರಿಕೆಯಲ್ಲಿ ಈ ರೀತಿ ಜಾಹಿರಾತೊಂದು ಪ್ರಕಟವಾಗಿತ್ತು ; ' ಇಪ್ಪತ್ತಮೂರು ವರ್ಷ ಪ್ರಾಯದ ರಾಜಕುಮಾರ(ಹಿಂದೀಯ ಸಂಸ್ಥಾನಾಧೀಶ್ವರರೊಬ್ಬರ ಕುಮಾರ) ಅಶ್ವಸವಾರ, ಟೆನ್ನಿಸ್, ಥಿಯೇಟರ್ ಇತ್ಯಾದಿ ಸಮಾಜಕೂಟಗಳಲ್ಲಿ ಭಾಗಿಯಾಗಲು ಎಳೇ ಪ್ರಾಯದ ಒಡನಾಡಿಯೊಬ್ಬಳನ್ನು ಅಪೇಕ್ಷಿಸುತ್ತಾನೆ ! ' [ಪ್ರ ಮಂ]

ಸ್ತ್ರೀ ಪ್ರಾತಿನಿಧ್ಯ

ಮದರಾಸು— ಪ್ರತಿಯೊಂದು ಜಿಲ್ಲೆಯಲ್ಲಿ ಓರ್ವ ಮುಸಲ್ಮಾನ ಮತ್ತು ಸವರ್ಣೀಯಳನ್ನು ಚುನಾವಣೆಗೆ ನಿಲ್ಲಿಸಬೇಕೆಂದು ತಮಿಳುನಾಡು ಕಾಂಗ್ರೆಸಿಯ ಚುನಾವಣಾ ಮಂಡಲ ಸೂಚಿಸಿರುತ್ತೆ.

ಆಂಧ್ರ ಪ್ರಾಂತ್ಯ ರಚನೆ

ಮದರಾಸು— ಮುಂಬರುವ ಸಾರ್ವತ್ರಿಕ ಚುನಾವಣೆಯೊಳಗೆ ಆಂಧ್ರ ಪ್ರಾಂತವಾಗುವದು ಘಟನಾತ್ಮಕವಾಗಿ ಸಾಧ್ಯವಿಲ್ಲವೆಂದು ಕಾಂಗ್ರೆಸ್ಸಿನ ಹಿಂದಿನ ಪ್ರಧಾನ ಕಾರ್ಯದರ್ಶಿ ಕಲಾ ವೆಂಕಟರಾಯುರು ಹೇಳಿರುವರು.

ಮಗುವಿನ ಅಳು ನಿಲ್ಲಿಸಲು

ಬ್ರಹ್ಮಚಾರಿ ವಿಚಿತ್ರ ಸಲಹೆ

ಲಾರ್ಡ್ ರ್ಮೆಕ್ಕಾಫ್ಟ್ ಎಂಬುವರು 36 ವರ್ಷ ಪ್ರಾಯದ ಬ್ರಹ್ಮಚಾರಿ ಬ್ಯಾರಿಸ್ಟರ್ ಆಳುವ ಮಕ್ಕಳನ್ನು ಸಮಾಧಾನ ಪಡಿಸಲು ಅವರು ಸೂಚಿಸಿರುವ ಒಂದು ಉಪಾಯ ಈ ರೀತಿಯಾಗಿದೆ—

' ಅಳುವ ಮಗುವನ್ನು ತಲೆ ಕೆಳಗೆ ಕಾಲು ಮೇಲು ಮಾಡಿ ಹಿಡಿದು ಒಂದಿಷ್ಟು ಕದಡಿಸಿ ಬಿಡಬೇಕು ; ಹೀಗೆ ಮಾಡುವುದರಿಂದ ಅದೊಂದು ರೀತಿಯ ವಾಯು ಒಂಥನವು ತಾನಾಗಿ ರಚಿಸಲ್ಪಟ್ಟು ಮಗುವು ಅಳುವುದನ್ನು ನಿಲ್ಲಿಸುವುದು ; ಮಗುವು ಬೇಗ ಅಳುವು ನಿಲ್ಲಿಸಬೇಕಾದರೆ ಜೋರಾಗಿ ಕದಡಿಸಬೇಕು. ನನಗೆ ಮಕ್ಕಳ ಮೇಲೆ ತಾತ್ಸಾರ ಇದ್ದುದರಿಂದ ಹೀಗ ಹೇಳುವೆನೆಂದು ನೆನಪಿಸಬೇಡಿ : ಆರು ವರ್ಷ ವರೆಗಿನ ಚಿಕ್ಕ ಹೆಣ್ಮಕ್ಕಳನ್ನು ಕಂಡರೆ ನನಗೆ ತುಂಬಾ ಪ್ರೀತಿ.'

SHAKTI SUDHA

A Superb Tonic



" ಗೋರಕ್ಷಣ "

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

ಆಯುರ್ವೇದ ವೈದ್ಯರ ಕರ್ತವ್ಯವೇನು ?

ದೇಶವು ಸ್ವತಂತ್ರವಾದ ಬಳಿಕ ನಮ್ಮ ಧರ್ಮ, ಸಂಸ್ಕೃತಿ, ಶಾಸ್ತ್ರ ಆಚಾರ ವಿಚಾರಗಳು ಪುನರ್ಜೀವಿತವಾಗಿ ಒಳಗಳು ಸುಖವಾಗಿ ಒಳಬಹುದೆಂಬ ನಿರೀಕ್ಷೆಯಿತ್ತು, ಆದೆಲ್ಲವೂ ಹಗಲುಗನಸಾಯಿತು. ನಂತರ ಬದಲಿಗೆ ದೇಶದ ಸ್ಥಿತಿಯು ತುಂಬಾ ಚಿಂತಾಜನಕವಾಯಿತು. ಸ್ವಾತಂತ್ರ್ಯ ಬಂದಾಗ ಅಧಿಕಾರವನ್ನು ವಹಿಸಿದ ಕಾಂಗ್ರೆಸ್ ಮಂತ್ರಿಗಳು ಆಯುರ್ವೇದ ಉನ್ನತಿಗೆ ಏನನ್ನೂ ಮಾಡಿಲ್ಲ, ಕೇಂದ್ರ ಮತ್ತು ಮದರಾಸಿನ ಆರೋಗ್ಯ ಮಂತ್ರಿಗಳು ಆಯುರ್ವೇದಕ್ಕಾಗಿ ತುಂಬಾ ಅನ್ಯಾಯವನ್ನೇ ಮಾಡಿದ್ದಾರೆ. ಮೈಸೂರಿನಲ್ಲಿಯಂತೂ ಮಂತ್ರಿಗಳ ಆಯುರ್ವೇದ ವಿಷಯದಲ್ಲಿ ಉಪೇಕ್ಷೆಯಿಂದ ಇದ್ದಾರೆ. ಎಲ್ಲೆಲ್ಲಿಯೂ ಪಾಶ್ಚಾತ್ಯ ವೈದ್ಯಕ್ಕೆ ಉತ್ತೇಜನವೇ ಹೆಚ್ಚುತ್ತಿದೆ ನಮ್ಮದೇ ಆದ ಧರ್ಮ ಸಂಸ್ಕೃತಿ ಶಾಸ್ತ್ರ ದಿಗಳನ್ನು ಪುನರುಜ್ಜೀವಿಸುವುದಕ್ಕಾಗಿ ನಮಗೆ ಸ್ವಾತಂತ್ರ್ಯ ಬೇಕಾಯಿತೇ ಹೊರತು, ಆದೊಂದೂ ಬೇಡವಾಗಿದ್ದಲ್ಲಿ, ಎಲ್ಲಾ ವಿಷಯಗಳಲ್ಲೂ ನಾವು ವಿದೇಶೀಯರನ್ನೇ ಅನುಕರಣೆ ಮಾಡಿ ಅಶ್ರಯಿಸಿ ಪರತಂತ್ರರಾಗಿಯೇ ಬಾಳುವುದಾದರೆ, ಆಳುವವರು ಯಾರಾಗಿದ್ದರೂ ಬಾಧಕವೇನಿತ್ತು ?

ಆಯುರ್ವೇದವು ನಮ್ಮ ದೇಶದ ಮಹಾ ವಿಜ್ಞಾನ ಅದನ್ನು ಅಭಿವೃದ್ಧಿಗೊಳಿಸಿದರೆ ಅದು ಪ್ರಪಂಚದಲ್ಲೇ ಉನ್ನತಸ್ಥಾನ ಗಳಿಸಬಲ್ಲದು ; ಅದರ ಮುಂದೆ ಯಾವ ಆಧುನಿಕ ವೈದ್ಯ ಪದ್ಧತಿಯೂ ತಲೆಯೆತ್ತಿ ನಿಲ್ಲಲಾರದು : ಅಂಥಾ ಆಯುರ್ವೇದದ ಉನ್ನತಿಗಾಗಿ ವೈದ್ಯರೆಲ್ಲರೂ ಸಂಘಟಿತವಾಗಿ ಕೆಲಸಮಾಡಬೇಕಾಗಿದೆ.

ಮೈಸೂರು ಸಂಸ್ಥಾನದಲ್ಲಿ ಸುಮಾರು ಹನ್ನೆರಡು ಸಾವಿರ ಮಂದಿ ವೈದ್ಯರಿದ್ದಾರೆ : ಇದು ಅತ್ಯಲ್ಪ ಸಂಖ್ಯೆಯೇನೂ ಅಲ್ಲ : ಒರವ ಮಹಾಚುನಾವಣೆಯಲ್ಲಿ ವೈದ್ಯರುಗಳು ಯಾವ ರಾಜಕೀಯ ಪಕ್ಷಗಳ ಬಲೆಗೂ ಬೀಳದೆ ಆಯುರ್ವೇದೋನ್ನತಿಗಾಗಿ ದುಡಿಯುವವರನ್ನೇ ತಮ್ಮ ಪ್ರತಿನಿಧಿಯನ್ನಾಗಿ ಆರಿಸಜೇಕು. ಆಯುರ್ವೇದ ಪಾಠಶಾಲೆ, ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಹೆಚ್ಚಿಸುವವಕ್ಕಾಗಿ ಪ್ರತಿಜ್ಞೆಮಾಡಿದವರಿಗೆ ಮಾತ್ರ ತಮ್ಮ ಓಟನ್ನು ಕೊಡುವುದಲ್ಲದೇ, ತಮ್ಮ ಮಿತ್ರರನ್ನೂ ಪ್ರೇರಿಸಿ ಮತಗಳನ್ನು ಕೊಡಿಸಿ ಆಯುರ್ವೇದಾಭಿಮಾನಿಯು ಜಯಶಾಲಿಯಾಗುವಂತೆ ಸಕಲ ಪ್ರಯತ್ನಗಳನ್ನೂ ಮಾಡಬೇಕು.

ಪಂಡಿತ ಕೆ ಪಿ ಪುಂಣಿಕ

ಅಪೇರ— 28–9–51 ರಿಂದ ಸರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ
ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ನಂಬಿಯಾರ್
ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 4–10–51 ರಿಂದ
2000 B. C.

ರಣಜಿತ್
— ಈ ದಿವಸ —
ಫಿಲಂಸ್ಥಾನ್ ವರ
ಮನಮೋಹನ ಹಿಂದಿ ಚಿತ್ರ

ಶಬಿಸ್ತಾನ್
ಪಾತ್ರ— ಕಣ್ಮರೆಯಾದ ಶಾಂ,
ನಸೀಮ್, ಸಪ್ರೂ, ಕಕ್ಕೂ
ಪ್ರತಿ ದಿನ 3 ಆಟಗಳು

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಮೋತಿಲಾಲ್ 5–10–51 ರಿಂದ
ಬಡಿ ಬಹೂ
ನಿಮ್ಮಿ, ಶೇಖರ್, ಸುಲೋಚನಾ ಚಟರ್ಜಿ ಪಾತ್ರವಹಿಸಿರುವ
ಅಮೋಘ ಹಿಂದಿ ಚಿತ್ರ — ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 2–10–51 ರಿಂದ 7 ದಿನಗಳು
ಕಿಂಗ್ ಆಫ್ ದಿ ರಾಕೆಟ್ ಮೆನ್ (ರಿಪಬ್ಲಿಕ್ ಸೀರಿಯಲ್)

Kann. (Eng. 474)

ಎಚ್ಚೆತ್ತ ಪೂರ್ವ ಮತ್ತು ಮಲೇರಿಯಾ

ಅತಿ ಕಡಮೆ ಸಮಯದಲ್ಲೇ ಇರ್ಕಾ (ಮೊದಲಿನ ಪರ್ಷಿಯಾ) ಪೂರ್ಣ ಬದಲಾವಣೆ ಹೊಂದಿದೆ : 17 ನೇ ಶತಮಾನದ ದೇಶದಿಂದ ಆಧುನಿಕ 20 ನೇ ಶತಮಾನದ ದೇಶವಾಗಿದೆ

ಪರ್ಷಿಯಾ ಹೆಂಗಸರ ರಾಷ್ಟ್ರೀಯ ಉಡುವು ಮಾಯವಾಗಿ ಬುರುಕೆ ಮತ್ತು ಮುಖ ಮುಚ್ಚುವ ಬಟ್ಟೆಗಳು ಕಡಮೆಯಾಗಿದೆ ; ಮತ್ತು ಪುರುಷರೂ ಏರೋಪ್ಯ ಉಡುಪು ಧಾರಣೆಗೆ ಪರಿವರ್ತಿತರಾಗಿದ್ದಾರೆ ಇನ್ನೂ ಕೆಲವು ಪ್ರಮುಖ ಬದಲಾವಣೆಗಳಾಗಿವೆ ; ಸೈನ್ಯ ಮತ್ತು ಪೋಲೀಸರಿಗೆ ಆಧುನಿಕ ಶಸ್ತ್ರಾಸ್ತ್ರಗಳು ಕೊಡಲಾಗಿದೆ ; ವಿವಿಧ ಗಡಿನಾಡು ಮುಖ್ಯಸ್ಥ ಮತ್ತು ಪಾಳೇಗಾರ್ ಪದ್ಧತಿ ನಿರ್ಮೂಲವಾಗಿದೆ ; ಕಳ್ಳಂಗುಂಪು ನಿರ್ನಾಮಮಾಡಲಾಗಿದೆ ; ಮತ್ತು ದೇಶನ ಕೈಗಾರಿಕೆ ಮತ್ತು ವ್ಯವಸಾಯ ಉತ್ಕರ್ಷಗೊಳಿಸಲಾಗಿದೆ : ಸಕ್ಕರೆ ಕಾರ್ಖಾನೆ ಮತ್ತು ಬಟ್ಟೆ ಗಿರಣಿಗಳು ಕಟ್ಟಲ್ಪಟ್ಟಿವೆ ; ಜಾರ್ರೇಜಾನಿನಲ್ಲಿ ಒಂದು ಧಾರ ನೂಲ ವ ಗಿರಣಿ ಸ್ಥಾಪಿಸಲಾಗಿದೆ, ಗೋಂನಲ್ಲಿ ಹಗ್ಗ ತಯಾರಿಸುವ ಕಟ್ಟಡ ಸಾಲು ಸಾಲಾಗಿವೆ, ಅಟೂಜಲೂಜೆನಲ್ಲಿ ರೇಷ್ಮೆ ಗೂಣಿಗಳಿವೆ. ರಾಜಧಾನಿಯಾ ತೆಹರಾನಿನಲ್ಲಿ ಸೀಮೆಂಟು ಮತ್ತು ಹೊಗೇಸೊಪ್ಪು ಫ್ಯಾಕ್ಟರಿಗಳಿವೆ. ನಗರಗಳೆಲ್ಲಾ ಆಧುನಿಕ ರೀತಿಯಲ್ಲಿದ್ದ ಎದ್ಯುದ್ದೀಪಗಳಿಂದ ಬೆಳಗುತ್ತಿವೆ.

ದೇಶದ ಆರೋಗ್ಯ ಪರಿಸ್ಥಿತಿ ಮತ್ತು ಜನರ ಆರೋಗ್ಯ ವಿಷಯದಲ್ಲಿ ವಿಶೇಷ ಎಚ್ಚರಿಕೆ ತೆಗೆದುಕೊಳ್ಳಲಾಗಿದೆ ; ದೇಶದ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳು ಕಟ್ಟಲಾಗಿವೆ ; ಜಹಾಜಾದಿನಲ್ಲಿ ಕ್ಷಯರೋಗದ ಆಸ್ಪತ್ರೆಯಿದೆ ; ಇದೆಲ್ಲದರ ಜೊತೆಗೆ, ವರ್ಷಂಪ್ರತಿ ಅನೇಕರನ್ನು ಅಹುತಿ ತೆಗೆದುಕೊಳ್ಳುತ್ತಿರುವ ಮಲೇರಿಯಾ ಮೇಲೆ ತೀವ್ರ ಕಾರ್ಯಾಚರಣೆ ನಡೆಸಲಾಗುತ್ತಿದೆ ಕ್ವಿನೈನಿಗೆ ವಂದನೆ ದಳು, ಆ ಶ್ರೇಷ್ಠ ಔಷಧಿಯಿಂದ ಭಯಂಕರ ಮಲೇರಿಯಾಕ್ಕೆ ತುತ್ತಾಗುತ್ತಿದ್ದವರ ಸಂಖ್ಯೆ ಬಹುಮಟ್ಟಿಗೆ ಕಡಮೆಯಾಗಿದೆ. ಮಾಜಿ ಲಿಗ್ ಆಫ್ ನೇಷನ್ಸಿನ ಮಲೇರಿಯಾ ನಿಪುಣ ಸಮಿತಿಯವರು, ಪ್ರತಿಬಂಧಕವಾಗಿ ದಿನವಹಿ 6 ಗ್ರೇನು ಕ್ವಿನೈನು, ಮತ್ತು ಮಲೇರಿಯಾ ತಗುಲಿದಾಗ ದಿನವಹಿ 15 ರಿಂದ 20 ಗ್ರೇನು ಕ್ವಿನೈನು ಸೇವನೆಯನ್ನು ಶಿಫಾರಸು ಮಾಡಿದ್ದಾರೆ

ಈ ಕಾರ್ಯಗಳನ್ನು ನಡೆಸುತ್ತಿರುವುದರಿಂದ, ಪೂರ್ವ ದೇಶಗಳು ಎಚ್ಚೆತ್ತಿವೆಯೆಂಬುದನ್ನು ಪರ್ಷಿಯಾವು ಪ್ರಪಂಚಕ್ಕೆ ತೋರಿಸುತ್ತಿದೆ.

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು
- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ.
ಭದ್ರಾವತಿ.

Edited, Printed and Published by Dharma Prachara Nimita M. S. Krishna Rao, at the Satyavadi Press Chamrajpura, Mysore